





ಮೇಷ್ಟ್ರು: ಕಪ್ಪೆ ನೀರು ಮತ್ತು ನೆಲದ ಮೇಲೆ ವಾಸಿಸುವ ಉದ್ದೇಶವೇನು?

ವಿದ್ಯಾರ್ಥಿ: ಬಾವಿ ಕಪ್ಪೆ ಎಂಬ ಆರೋಪದಿಂದ ಹೊರಬರಲು.

***

ಬಾಲಾಜಿ: ಏನಯ್ಯ ವೆಂಕಟರಮಣ ನಿಮ್ಮನೇಲಿ ಅತ್ತೆ ಸೊಸೆ ಹೇಗಿದ್ದಾರೆ?

ವೆಂಕಟರಮಣ: ಅತ್ತೆ ಧಾರಾವಾಹಿ ನೋಡ್ಕಂಡವ್ರೆ, ಸೊಸೆ ಮೊಬೈಲ್ ನೋಡ್ಕಂಡವ್ರೆ.

***







ವೆಂಕಟೇಶ: ಕನ್ನಡ ಕಟ್ಟುವ ಕೆಲಸವನ್ನು ಯಾವ ರೀತಿ ಮಾಡಬೇಕು?

ಶ್ರೀನಿವಾಸ: ಹಾಗಿದ್ದರೆ, ಸರ್ಕಾರಿ ಶಾಲೆಗಳನ್ನು ಅ ಆ ಇ ಈ ಆಕಾರದಲ್ಲಿ ಕಟ್ಟಬೇಕು.

***

ಬಾಲಾಜಿ: ಏನಯ್ಯ ವೆಂಕಟರಮಣ, ನಿಮ್ಮೂರಿನಲ್ಲಿ ಹೇಳಿಕೊಳ್ಳುವಂಥದ್ದು ಏನಿದೆ?

ವೆಂಕಟರಮಣ: ಚಿರತೆ ಕಾಟ.

***

ಶ್ರೀನಿವಾಸ: ಪ್ರಾಣಿಗಳ ಮೇಲೆ ದಯೆ ಇರಲಿ ಅಂತ ಸರ್ಕಾರಿ ಬಸ್‌ಗಳ ಮೇಲೆ ಹಾಕಿರುವ ಉದ್ದೇಶವೇನು?

ವೆಂಕಟೇಶ: ಚಾಲಕರು ಪ್ರಾಣಿಗಳ ಮೇಲೆ ಬಸ್ ಚಲಾಯಿಸದಿರಲೆಂದು.

***

ಮೇಷ್ಟ್ರು: ಭೂಮಿ ಸೂರ್ಯನ ಸುತ್ತ ಸುತ್ತಲು ಕಾರಣವೇನು?

ವಿದ್ಯಾರ್ಥಿ: ಚಳಿಗಾಲ ಸಾರ್. ಮೈ ಬಿಸಿ ಮಾಡಿಕೊಳ್ಳಲು.

***

ಗಂಡ: ಮೂರು ತಿಂಗಳು ಮೊದಲು ನಮ್ ಮದುವೆ ಆಗಿದ್ದಿದ್ರೆ ನಮ್ಮಮ್ಮ ಸಹ ಮದುವೆಯನ್ನ ಕಣ್ತುಂಬಿಕೊಳ್ಳುತ್ತಿದ್ದರು.

ಹೆಂಡತಿ: ನಮ್ಮಮ್ಮ ಹುಡುಕಿದ್ದೆ ಅತ್ತೆ ಮಾವ ಇಲ್ಲದ ಹುಡುಗನನ್ನ ಸುಮ್ನಿರ್ರಿ.

***

ಮೇಷ್ಟ್ರು: ಸರ್ದಾರ್ ವಲ್ಲಭಭಾಯಿ ಪಟೇಲ್ ಅವರನ್ನು ಭಾರತದ ಉಕ್ಕಿನ ಮನುಷ್ಯ ಅಂತ ಯಾಕೆ ಕರೆಯುತ್ತಾರೆ?

ವಿದ್ಯಾರ್ಥಿ: ಅವರ ಏಕತಾ ಪ್ರತಿಮೆಯನ್ನು ಉಕ್ಕಿನಿಂದ ಮಾಡಿರುವುದರಿಂದ ಸಾರ್.

***

ಮೇಷ್ಟ್ರು: ಅಕ್ಷರಗಳನ್ನು ಗುಂಡು ಗುಂಡಾಗಿ ಬರೆಯಬೇಕು.

ವಿದ್ಯಾರ್ಥಿ: ಗುಂಡು ಗುಂಡಾಗಿ ಬರೆದರೆ ವೃತ್ತಗಳಾಗುತ್ತವೆ ಸಾರ್.

ಸಂಗ್ರಹ: ಮಲ್ಲಿಕಾರ್ಜುನ, ಸುರಧೇನುಪುರ